ರಾಜ್ಯದಲ್ಲಿ ಕೃಷಿ ಮಹಾವಿದ್ಯಾಲಯಗಳನ್ನು ಸ್ಥಾಪಿಸುವ ಬಗ್ಗೆ

೪೬೦ (೧೬೪೪) ಶ್ರೀ ಎಂ. ಮಹದೇವ್(ನಂಜನಗೂಡು).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಈ ವರ್ಷ ಹೊಸ ಕೃಷಿ ಕಾಲೇಜುಗಳನ್ನು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳಗಳಾವುವು ?

ಆ) ನಂಜನಗೂಡು ಎಲ್ಲಾ ವಿಧದಲ್ಲೂ ಕೃಷಿ ಕಾಲೇಜಿನ ಸ್ಥಾಪನೆಗೆ ಸೂಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ, ನಂಜನಗೂಡಿನಲ್ಲಿ ಕೃಷಿ ಕಾಲೇಜನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಮಂಡ್ಯ, ಶಿವಮೊಗ್ಗ, ಮತ್ತು ಬಿಜಾಪುರದಲ್ಲಿ ಕೃಷಿ ಕಾಲೇಜುಗಳನ್ನು ಪ್ರಾರಂಭಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕಂಠಿಗಲ್ ಪುರಸಭೆಗೆ ಸೇರಿದ ಆಸ್ತಿಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿರುವ ಬಗ್ಗೆ

೪೬೧ (೧೩೫೧) ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

(ಅ) ಕುಣಿಗಲ್ ಪುರಸಭೆಗೆ ಸೇರಿದ ಆಸ್ತಿಯನ್ನು ಅತಿ ಕಡಿಮೆ ಬೆಲೆಗೆ ಖಾಸಗಿ ಜನಗಳಿಗೆ ಮಾರಿರುವುದು ಸತ್ಯ ಸಂಗತಿಯೇ ?

(ಆ) ಸದರಿ ಆಸ್ತಿಯನ್ನು ಪುರಸಭೆ ಹಿಂತಿರುಗಿ ಪಡಿಸಿಕೊಳ್ಳಲು ಯಾವುದಾದರೂ ತಗಾದೆ ಅರ್ಜಿ ಬಂದಿದೆಯೇ ?

(ಇ) ಈ ವಿಷಯದಲ್ಲಿ ಕೈಗೊಂಡಿರುವ ಕ್ರಮ ಏನು ?

ಶ್ರೀ ಟಿ. ಎನ್. ನರಸಿಂಹಯ್ಯರ್ (ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಶ್ರೀ ಕುಣಿಗಲ್‌ನ ಕೆ.ಆರ್. ಎಸ್. ಆಗ್ರಹಾರದಲ್ಲಿ ರಚಿಸಿದ ಲೇಔಟ್‌ನಲ್ಲಿ ೧೨ ನಿವೇಶನಗಳನ್ನು ಪುರಸಭೆ ನಡವಳಿಕೆ ನಂ. ೬ ದಿನಾಂಕ ೧೨-೧೦-೮೮ರ ಅನುಪಾತ ನಿವೇಶನ ಒಂದಕ್ಕೆ ೫೦೦ ರೂಪಾಯಿನ ಕಿಮ್ಮತ್ತಿನಂತೆ ಮಾರಿ ಈ ಪ್ರಾರಾಟವನ್ನು ಸ್ಥಿರೀಕರಿಸಲು (ಮಂಜೂರಾತಿ ನೀಡಲು ದಿನಾಂಕ ೧೮-೧-೮೯ರ ರಂದು ಮುಖ್ಯಾಧಿಕಾರಿಗಳು ತುಮಕೂರು ಜಿಲ್ಲಾಧಿಕಾರಿಗಳನ್ನು ಕೋರಿರುತ್ತಾರೆ.

(ಆ) ಕುಣಿಗಲ್‌ನ ಅಂಬೇಡ್ಕರ್ ಹರಿಜನ ಯುವಕ ರೈತ ಸಂಘದವರು ಮೇಲ್ಕಂಡ ನಿವೇಶನಗಳನ್ನು ನಿವೇಶನ ರಹಿತ ಹರಿಜನರಿಗೆ ನೀಡಬೇಕಾಗಿತ್ತೆಂದು ಹಾಲಿ ಮಾರಾಟ ಮಾಡಿರುವುದು ಅಕ್ರಮವಾಗಿರುವುದೆಂದು ಕೋರಿ ಜಿಲ್ಲಾಧಿಕಾರಿಗಳಿಗೆ ತಕರಾರು ಅರ್ಜಿ ಸಲ್ಲಿಸಿರುತ್ತಾರೆ.

(ಇ) ತುಮಕೂರು ಜಿಲ್ಲಾಧಿಕಾರಿಗಳು ಆಲ್ಲಿ ತುಮಕೂರು ಉಪ ವಿಭಾಗಾಧಿಕಾರಿಯನ್ನು ಈ ವಿಷಯದಲ್ಲಿ ಕುಲಂಕುಷ ತನಿಖೆ ಮಾಡಿ ವರದಿ ಮಾಡಲು ಕೋರಿರುತ್ತಾರೆ.

ತುಮಕೂರು ಉಪ ವಿಭಾಗಾಧಿಕಾರಿಗಳು ತಹಶೀಲ್ದಾರ್ ಕುಣಿಗಲ್ ಇವರಿಗೆ ಪತ್ರ ಬರೆದಿದ್ದು ತಹಶೀಲ್ದಾರರು ತಪ್ಪು ಅಸಪ ೨೦೪ ೮೯-೯೦ ದಿನಾಂಕ ೧೨-೬-೧೯೮೯ ರಲ್ಲಿ ಕೂಲಂಕುಷ ತನಿಖೆ ನಡೆಯಿಸಿ ನಿವೇಶನಗಳ ವಿಲೇವಾರಿ ಬಗ್ಗೆ ನಡೆದಿರುವ ಅಕ್ರಮಗಳ ಬಗ್ಗೆ ಸವಿಸ್ತಾರವಾದ ವರದಿ ಮಾಡಿರುತ್ತಾರೆ: ಹಾಲಿ ವಿಷಯವು ಜಿಲ್ಲಾಧಿಕಾರಿಗಳು ತುಮಕೂರು ಇವರ ತೀರ್ಮಾನದಲ್ಲಿ ಇರುತ್ತದೆ.